The Mysore Press

Mysore

WE UNDERTAKE TO PRINT

JOBS BOOKS & PERIODICALS

Neat Workmanship Prompt Execution Moderate Charges

Printed and Published by B. S. Murthy, B. A., at the Mysore Press, Mysore, for the Editor and

ಉಚಿತ ಪ್ರತಿ ಕೇಳಿ.

ವಾರ್ಷಿಕ ಚಂದಾ (ಅಂಚೆಯ ಸೇರಿ) ರೂ. 1—8—0
ಒಂದು ವರ್ಷಕ್ಕೆ ಕಡಮೆ ಚಂದಾ ತೆಗೆದುಕೊಳ್ಳುವುದಿಲ್ಲ.
ವಿ. ಪಿ. ಪದ್ಧತಿ ಇಲ್ಲ.
ಪ್ರಕಟಣೆ ದರವನ್ನು ಬೇಕಾದವರಿಗೆ ತಿಳಿಸುತ್ತೆ.

Office—Chamaraja Agrahar, Mysore
ಆಫೀಸ್—ಚಾಮರಾಜ ಅಗ್ರಹಾರ ಮೈಸೂರು

SATYAVADI

"ಸತ್ಯವಾದಿ" ವಾರಪತ್ರಿಕ

ಪ್ರತಿ ಶುಕ್ರವಾರವೂ ಪ್ರಕಟಿಸಲ್ಪಡುವುದು

Regd. No. M. 1299.

"SATYAVADI"
OFFERS A
Profitable Medium
For Advertising
Space limited
Rates on enquiry

ಸಂಪುಟ ೭] ಮೈಸೂರು, ಶುಕ್ರವಾರ, ೧೧ನೇ ಮೇ ೧೯೩೫. [ಸಂಚಿಕೆ ೧೯

೧೦೦೦ ರೂಪಾಯಿಗಳ ಬಹುಮಾನ
ಲೋಕಪ್ರಸಿದ್ಧವಾದ
ಸಾಲಾಮಿಸ್ರಮುರಬ್ಬ
ನಮ್ಮ ಟ್ರೇಡ್ ಮಾರ್ಕನ್ನು ನೋಡಿ ಈ ಔಷಧವನ್ನು ತಗೆದುಕೊಳ್ಳಿರಿ

ಇದರ ಸೇವನೆಯಿಂದ ವೀರ್ಯವು ನೀರಿಸಂತಿದ್ದರೂ ಸ್ವಪ್ನೇಂದ್ರಿಯವಾದರೂ ಸ್ತ್ರೀಸಂಗಕ್ಕೆ ಮೊದಲಿನ ಸ್ಥಿರವಾದರು ಮೂತ್ರದೊಂದಿಗೆ ಹೊಗುತ್ತಿದ್ದರೂ, ದೋಷದ ಹಿತವಾಗಿ ಶರೀರಕ್ಕೆ ದಾರ್ಢ್ಯವನ್ನೂ ಆರೋಗ್ಯವನ್ನೂ ಉಂಟುಮಾಡುವದು, ಅಜೀರ್ಣ, ಮಲಬದ್ಧತೆ, ಮೆದುಳಿನ ಬಲಹೀನತೆ ಕೈಕಾಲು ಸೊಂಟ ನೋವುಗಳಿಗೆ ಇದು ದಿವ್ಯ ಔಷಧವು. ಈ 'ಸಾಲಾಮಿಸ್ರ' ಎಂಬುವುದು ಕಾಬೂಲ್ ಕಾಂದಹಾರ್ ಸ್ಯಾಂತ್ಯಗಳಲ್ಲಿ ಬೆಳೆಯುತ್ತದೆ. ಈ ಔಷಧದಿಂದ ಗುಣಹೊಂದಿದ ಅನೇಕ ಮಹನೀಯರು ತಾವಾಗಿಯೇ ಅನೇಕ ದೇಶಗಳಿಂದಲೂ, ಆಫ್ರಿಕ, ಬರ್ಮ, ಪೀನಾಂಗ್, ಸಿಲೋನ್ ಮತ್ತು ಇಂಡಿಯಾ ದೇಶದ ಎಲ್ಲಾ ಸ್ಥಳಗಳಿಂದಲೂ ನಮಗೆ ಯೋಗ್ಯತಾಪತ್ರಿಕೆಗಳನ್ನು ಕಳುಹಿಸಿರುವರು. ಇವುಗಳ ನಕಲನ್ನು [illegible]ಕಾದರೂ ತರಿಸಿ ನೋಡಬಹುದು. [illegible] ಎಂದು ನಿರ್ಧರಪಡಿಸುವವ [illegible]ಮಾನವು ಕೂಡಲ್ಪ [illegible] ಕೊಡದೆ ನಿರಾಕರಿಸಿ [illegible]ಕ ಅದನ್ನು ಪಡೆಯ [illegible] 15 ದಿವಸ ಸೇವಿಸಿ [illegible]ವಾಗಿ ತೋರಬಹುದು. [illegible]ಪೂರ್ಣವಾಗಿ ಗುಣವ [illegible]ವು. ಅನುಪಾನ ಪತ್ರಿಕೆಯು [illegible] ಇರುತ್ತೆ. ಹೆಸರು ವಿಳಾಸ [illegible]ಯುವಂತೆ ಇರಬೇಕು.

[illegible]ಡಬ್ಬಿ 1 ಕ್ಕೆ ರೂ. 2—0—0
[illegible]ಲು ಖರ್ಚು 1 ರಿಂದ 3 ಡಬ್ಬಿಗಳಿಗೆ 8 [illegible] ಏಜಂಟರು ಎಲ್ಲಾ ಸ್ಥಳಗಳಲ್ಲಿಯೂ [illegible]ವಾಗಿ ಬೇಕಾಗಿರುತ್ತೆ. ರೂಲ್ಸ್ ತರಿಸಿ ಕೊಳ್ಳಬಹುದು.

[illegible]ಡ್ರೆಸ್—ಮಿಸ್ರ, ಬೆಂಗಳೂರು ಸಿಟಿ.
[illegible]ಡಿ. ಮನ್ನಾಲಾಲ್, ಡೆಲ್ಲಿ ವೈದ್ಯರು, [illegible]ಲಾಮಿಸ್ರ ಮುರಬ್ಬಾ ಡಿಪೋ, [illegible]

ಸೀಮೆ ಭಂಗಾತದ ರೇಡಿಯಂ ರಿಸ್ಟ್‌ವಾಚ್



ಚಿತ್ರದಲ್ಲಿ ಕಾಣುವಂತೆಯೇ ಇರುವ ಈ ಗಡಿಯಾರಗಳು ಹೊಸದಾಗಿ ಬಂದಿವೆ. ಈ ಗಡಿಯಾರದ ಕಾಂಪೊಸಿಷ್ಟಗಳು ಬಹು ಒಳ್ಳೆಯವು. ಮತ್ತು ಬಲಿಷ್ಟವಾದವು. ವ್ಯತ್ಯಾಸವಿಲ್ಲದೆ ಕಾಲವನ್ನು ತೋರಿಸುವುದು. ಒಂದು ವೇಳೆ ಹಿಂದು ಮುಂದು ಹೋದರೂ ನಾವೇ ಸರಿಮಾಡಿಕೊಳ್ಳಬಹುದು. ಈ ಗಡಿಯಾರಗಳು ಸ್ವಿಡ್ಜರ್‌ಲ್ಯಾಂಡು ದೇಶದಲ್ಲಿ ತಯಾರಾದುವು. ಇತರ ಗಡಿಯಾರಗಳಲ್ಲಿ ರಾತ್ರಿ ವೇಳೆಯಲ್ಲಿ ಗಂಟೆ ನೋಡಬೇಕಾದರೆ ಬೆಳಕು ಬೇಕು. ಈ ಗಡಿಯಾರಗಳಲ್ಲಿ ರಾತ್ರಿ ವೇಳೆಯಲ್ಲಿ ಗಂಟೆ ನೋಡಬೇಕಾದರೆ ಬೆಳಕು ಅವಶ್ಯಕವಿಲ್ಲ. ಎಷ್ಟು ಕತ್ತಲೆಯಾಗಿರುತ್ತೋ ಅಷ್ಟು ಚೆನ್ನಾಗಿ ಸೂರ್ಯನಂತೆ ಪ್ರಕಾಶವಾಗಿ ಗಂಟೆ ತೋರಿಸುವುದು. ಹಗಲು ವೇಳೆಯಲ್ಲಿ ಸಾಧಾರಣ ಗಡಿಯಾರಗಳಂತೆ ಇರುವುದು.

ಕ್ರಯ ಗಡಿಯಾರ 1 ಕ್ಕೆ ರೂ. 7—8—0
ಬೆಳ್ಳಿ ಗಡಿಯಾರ 1 ಕ್ಕೆ ರೂ. 9—0—0

ವಿಳಾಸ:—ಗೌರಿ ಅಂಡ್ ಕೋ.,
ನಂ. 39 ಪರಮಾನಂದ ಮೊದಲಿ ಬೀದಿ.
ಮಿಂಟ್ ಪೋಸ್ಟು, ಮದರಾಸ್.

ಹೊಸಮಾದರಿಯ ಊದಬತ್ತಿಗಳು

ಉತ್ತಮವಾದ ಮೂಲಿಕೆಗಳಿಂದಲೂ ಅತ್ತರು ಮೊದಲಾದ ಸಾರಗಳಿಂದಲೂ ಒಡಗೂಡಿ ದೇವತಾ ಪೂಜ್ಯಕ್ಕೆ ಯೋಗ್ಯವಾದ 'ದಶಾಂಗಬತ್ತಿ' ಎಂಬ ದಾಗಿ ಪ್ರಸಿದ್ಧಿಹೊಂದಿರುವ ಹೊಸರೀತಿಯ ಊದು ಬತ್ತಿಗಳು ನಮ್ಮಲ್ಲಿ ತಯಾರಾಗಿ ಬಿಕರಿಗೆ ಸಿದ್ಧವಾಗಿವೆ ಕ್ರಯ ಸೇರು ೧ ಕ್ಕೆ (ಸುಮಾರು ೬೦೦ ಬತ್ತಿಗಳು) ೩ ರೂಪಾಯಿ ಮಾತ್ರ. ಸರ್ವರೂ ತರಿಸಿ ತನ್ಮೂಲಕ ನಮ್ಮ ಶ್ರಮವನ್ನು ಸಾರ್ಥಕಗೊಳಿಸಬೇಕಾಗಿ ಪ್ರಾರ್ಥನೆ. ನಮ್ಮಲ್ಲಿ ಇನ್ನೂ ಇತರ ವಿಧವಾದ ಹೆಬ್ಬಿನ ಬೆಲೆಯ ಫ್ಲಂಬರ್ ಕಸ್ತೂರಿಬತ್ತಿಗಳೂ, ಗಂಧದಬಲ್ಲೆ ಅರಗಜ, ಪನ್ನೀರು ವಗೈರೆ ಸಹಾ ದೊರೆಯುತ್ತೆ.

ಇದಲ್ಲದೆ ನಂಜನಗೂಡಿನ ಮಿ|| ಬಿ.ವಿ. ಪಂಡಿತರ ಲೋಕಪ್ರಸಿದ್ಧವಾದ ಸಿದ್ಧೌಷಧಗಳೂ, ಪರಬತ್ತುಗಳೂ, ತೈಲಗಳೂ, ಲೇಹ್ಯಗಳೂ ನಮ್ಮಲ್ಲಿ ಸಿಕ್ಕುತ್ತೆ.

ಸಿ. ಪದ್ಮಯ್ಯ, ಕಮರ್ಷಿಯಲ್ ಹಾಲ್,
ನಂಜೇವೇಟಿ, ಮೈಸೂರು.

ಸತ್ಯವಾದಿ ಪ್ರೆಸ್ ಮೈಸೂರು

—೦—

ನಾವು ಎಲ್ಲಾ ವಿಧವಾದ ಮುದ್ರಣ ಕೆಲಸವನ್ನೂ ಸುಲಭ ದರದಿಂದಲೂ, ಸೊಗಸಾಗಿಯೂ, ಸಕಾಲದಲ್ಲಿ

MYSORE GOVERNMENT
LOAN BONDS
&
Shares of Prominent
Companies
BOUGHT & SOLD
For particulars apply to:—
THE SEMAH ELISHA COMPANY
MYSORE.

ಮೈಸೂರು ಸರ್ಕಾರಿ ಸಾಲದ ಪತ್ರ ಮತ್ತು ಕಂಪೆನಿ ಷೇರುಗಳನ್ನು ಕೊಂಡುಕೊಳ್ಳುತ್ತೇವೆ ಮತ್ತು ಬಿಕರಿ ಮಾಡುತ್ತೇವೆ.

ಸೇಮಾ ಇಲೈಷಾ ಕಂಪೆನಿ ಮೈಸೂರು.

ಭಾರತ ಸರ್ವಸ್ವ

ಭರತಖಂಡದ ಪ್ರಖ್ಯಾತ ಕವಯಿತ್ರಿಯರೂ ಉಜ್ವಲ ದೇಶಭಕ್ತೆಯರೂ ಆದ ಶ್ರೀಮತಿ ಸರೋಜಿನಿ ದೇವಿಯರ ಸುಪ್ರಸಿದ್ಧ ಪುಸ್ತಕವಾದ 'ಸ್ಪೀಲ್ ಆಫ್ ಇಂಡಿಯ' ಎಂಬುದರ ಕನ್ನಡ ಪರಿವರ್ತನ ಕ್ರಯ 1 ಆಣೆ ಒಂದೂವರಾಣೆಯ ಸ್ಟ್ಯಾಂಪನ್ನು ಕಳುಹಿಸಿದರೆ ಒಂದು ಪುಸ್ತಕ ಕಳುಹಿಸಲ್ಪಡುತ್ತದೆ.

ವಿಳಾಸ—ಸತ್ಯವಾದಿ ಆಫೀಸ್, ಮೈಸೂರು.

ಕಲಾಮಂದಿರಂ, ಬೆಂಗಳೂರು ಸಿಟಿ

ನಮ್ಮಲ್ಲಿ ಎಲ್ಲಾ ವಿಧವಾದ ಪೈಂಟಿಂಗ್ ಎಂಗ್ರೇಜ್‌ಮೆಂಟು ಕೆಲಸಗಳೂ, ಚಿತ್ರಪಠಗಳನ್ನು ಬರೆಯುವುದು ಮುಂತಾದ ಕುಶಲವಿದ್ಯೆಗಳು ಉತ್ತಮ ರೀತಿಯಿಂದ ನಡೆಯುತ್ತವೆ. ಮತ್ತು ವಿದ್ಯಾರ್ಥಿಗಳನ್ನು ಕುಶಲವಿದ್ಯೆಗಳಲ್ಲಿ ತಯಾರ್ಮಾಡುವೆವು. ಈ ಒಂದು ತಿಂಗಳವರಿಗೆ 15-12 ಸೈಜು ಎಂಗ್ರೇಜ್‌ಮೆಂಟ್ ಮಾಡುವುದಕ್ಕೆ ಕಮ್ಮಿ ಚಾರ್ಜು ಅಂದರೆ 12 ರುಪಾಯಿಗೆ ಮಾಡಿಕೊಡುವೆವು. ಫೋಟೋ

“ಸತ್ಯವಾದಿ”

೧ ನೇ ಮೇ ೧೯೩೫

ಕವಿತಾ ಬಹುಮಾನಸ್ಪರ್ಧೆ

೨

ಸಂಸ್ಥಾನದಲ್ಲಿ ಕವಿತ್ವಮಾಡುವ ವಿದ್ವಾಂಸರೆಷ್ಟು ಮಂದಿ ಇರುವರೋ ಅವರನ್ನೆಲ್ಲಾ ಮೊಟ್ಟವೊದಲು ಒಟ್ಟುಗೂಡಿಸಿ ಒಂದು ಮಹಾಸಭೆಯನ್ನೇರ್ಪಡಿಸುವುದು. ಈ ಸಭಿಕರು ತಮ್ಮಲ್ಲಿಯೇ ಹತ್ತು ಮಂದಿ ಕವಿಗಳನ್ನಾಯ್ದು ಪ್ರಾಜ್ಞಮಂಡಲಿಯನ್ನು ವಿರಚಿಸುವುದು. ಈ ಮಂಡಲಿಯು ಇದುವರೆಗೂ ಗದ್ಯಗ್ರಂಥಗಳನ್ನೂ, ಪದ್ಯಗ್ರಂಥಗಳನ್ನೂ ನಾಟಕಪ್ರಹಸನಾದಿಗಳನ್ನೂ ರಚಿಸಿಯೂ ರಚಿಸುತ್ತಲೂ ಇರುವ ಕವಿಗಳ ಗ್ರಂಥಗಳನ್ನು ಪರೀಕ್ಷಿಸಿ ಉತ್ತಮಮಧ್ಯಮಗಳನ್ನು ನಿರ್ಣಯಿಸಿ ಅವುಗಳಿಗೆ ಬಹುಮಾನವನ್ನೋ ಅಥವ ಬಿರುದನ್ನೋ ಕೊಡಿಸುವುದು. ಹೀಗೆ ಬಹುಮಾನವನ್ನಾಗಲೀ ಬಿರುದನ್ನಾಗಲೀ ಪಡೆದ ಕವಿಗಳನ್ನೇ ಪ್ರತಿವರ್ಷವೂ ಪ್ರಾಜ್ಞಮಂಡಲಿಗೆ ಸಭಾಸದರನ್ನಾಗಿ ಆರಿಸಿಕೊಳ್ಳುವುದು. ಇಂತಹ ಸಭಾಸದರು ಮುಂದಾಗಿ ಸಭೆಸೇರಿ ಶ್ರೀಮಹಾಪ್ರಭುಗಳವರ ಅಭಿಪ್ರಾಯವನ್ನರಿತು ಅದರಂತೆ ಲೋಕೋಪಕಾರವಾದ ಇವುದಾದರೊಂದು ಗ್ರಂಥರಚನೆಯನ್ನು ಬಹುಮಾನಸ್ಪರ್ಧೆಗಾಗಿ ಪ್ರಕಟಿಸುವುದು. ಸ್ಪರ್ಧಿಸುವ ಕವಿಗಳು ತಂತಮ್ಮ ಅಭಿಪ್ರಾಯವನ್ನು ಮುಂಡಾಗಿಜ್ಞೋ ಪ್ರಾಜ್ಞಸಭೆಗೆ ತಿಳಿಸಿ ತರುವಾಯ ಗ್ರಂಥರಚನೆಯನ್ನು ಕೈಗೊಳ್ಳುವುದು. ನಿಷ್ಕೃಷ್ಟವಾದ ಕಾಲಕ್ಕೆ ಬಂದುಸೇರುವ ಈ ಗ್ರಂಥಗಳನ್ನು ಪ್ರಾಜ್ಞಮಂಡಲಿಯವರು ಆಯಾ ಗ್ರಂಥಕಾರರಿಂದಲೇ ಓದಿಸಿಕೇಳುವುದು. (ಇದನ್ನು ಬಹಿರಂಗವಾಗಿಯೇ ನಡೆಯಿಸುವ ಪದ್ಧತಿಯಿಂದ ಯಾವ ಹಾನಿಯೂ ಇರಲಾರದು) ಅವುಗಳಲ್ಲಿ ಉತ್ತಮ ಮಧ್ಯಮಗಳನ್ನು ನಿರ್ಣಯಿಸಿದಬಳಿಕ ಅವುಗಳನ್ನು ಸಭಾಧಿಕಾರಸ್ಥಾನದಿಂದಮುದ್ರಣಗೊಳಿಸಿ ಶ್ರೀಮಹಾಪ್ರಭುಗಳವರು ಇಷ್ಟಪಟ್ಟಕಾಲದಲ್ಲಿ ಆಯಾ ಕವಿಗಳಿಂದ ಓದಿಸಿಕೇಳಿ ಆ ಕವಿಗಳಿಗೆ ಕೇವಲ ಹಣ, ಶಾಲು ಇವುಗಳನ್ನು ಬಹುಮಾನಮಾಡಿ ಅಂದಿಗೇ ಆದರ ನೆನಪು ಅದೃಶ್ಯವಾಗುವಂತೆ ಎಸಗುವುದಕಿಂತ ಪಾಠಶಾಲೆಗಳಲ್ಲಿ ಪಠ್ಯಪುಸ್ತಕಗಳನ್ನಾಗಿ ನಿರ್ಪಡಿಸಿ ತನ್ಮೂಲಕವಾಗಿಯೂ, ಆ ಕವಿಗಳು ತಂತಮ್ಮ ಆರಮನೆಯ ವಿದ್ವಾಂಸರಾಗಿದ್ದರೆ ಬಡ್ತಿಮಾಡುವುದರ ಮೂಲ್ಕವಾಗಿಯೂ, ಸ್ವತಂತ್ರರಾಗಿದ್ದರೆ ಆಸ್ಥಾನದ ವಿದ್ವದ್ಗೋಷ್ಠಿಗೆ ಸೇರಿಸಿಕೊಳ್ಳುವುದರ ಮೂಲಕವಾಗಿಯೂ, ಸಂಸ್ಥಾನದಲ್ಲಿ ಉತ್ತಮ ವಿದ್ವಾಂಸರೆನಿಸಿಕೊಂಡವರಾಗಿಯೇ ಇದ್ದರೆ ಖಾಸಾಹಾರಾ ಬಿರುದು ಮುಂತಾದುವುಗಳನ್ನು ಕೊಡುವುದರ ಮೂಲಕವಾಗಿಯೂ ಪ್ರೋತ್ಸಾಹಿಸಬಹುದಾಗಿದೆ.

ವರ್ಣಾಶ್ರಮಧರ್ಮವೂ ಭೋಜನಪ್ರತಿಭೋಜನಗಳೂ

ಈ ಸಂಗತಿಗಳನ್ನು ಕುರಿತು ಮಹಾತ್ಮಾ ಗಾಂಧಿಯವರು ೧೯೩೧ ನೆ ಅಕ್ಟೋಬರ್ ೬ ನೆ ತಾರೀಖು ಯಂಗ್ ಇಂಡಿಯಾ ಪತ್ರಿಕೆಯಲ್ಲಿ ಹೀಗೆ ಬರೆದಿದ್ದರು

ವರ್ಣಾಶ್ರಮಧರ್ಮವೆಂಬುವದು ಮಾನವಪ್ರಕೃತಿಯಲ್ಲಿಯೆ ಸ್ವತಸಿದ್ಧಿಯಾಗಿರುವದು. ಇದು ಹುಟ್ಟುತಲೆ ಸೇರಿಯೇ ಇರುವುದು. ಒಬ್ಬ ಮನುಷ್ಯನು ತನ್ನ ಇಷ್ಟಪ್ರಕಾರವಾಗಿ ತನ್ನ ವರ್ಣವನ್ನು ಬದಲಾಯಿಸಿಕೊಳ್ಳಲು ಅಸ್ಪದವಿಲ್ಲ. ಯಾವನಾದರೂ ತನ್ನ ವರ್ಣವನ್ನು ಬಿಟ್ಟಿದ್ದಾದರೆ ಆತನು ವಂಶಪಾರಂಪರ್ಯವಾಗಿ ಸೂತ್ರವನ್ನು ಭಂಗಮಾಡಿದವನಾಗುವನು ಆದರೆ ಇದನ್ನು ಆಧಾರವನ್ನಾಗಿಟ್ಟುಕೊಂಡು ಸಂಘವನ್ನು ಲೆಕ್ಕವಿಲ್ಲದಕುಲಗಳಾಗಿ ಭಿನ್ನಮಾಡುವದಕ್ಕೆ ಎಲ್ಲೂ ಅನಕಾಶವಿಲ್ಲವು ಇದು ಅನ್ಯಾಯವು. ಚಾತುರ್ವರ್ಣವಿಭಜನೆಯೊಂದೇ ಸಾಕಾಗಿರುವುದು

ಇತರ ಕುಲದವರಲ್ಲಿ ಕಲೆತು ಭೋಜನಮಾಡುವುದಾಗಲೀ, ಅಷ್ಟೇಕೆ, ಇತರ ಕುಲದವರಲ್ಲಿ ವಿವಾಹ ಸಂಬಂಧವನ್ನೇರ್ಪಡಿಸುವುದಾಗಲೀ ತನಗೆ ಜನ್ಮತಃ ಉಂಟಾದ ಪದವಿಗೆ ಭಂಗವುಂಟಾಗುವುದೆಂಬುದನ್ನು ನಾನು ನಂಬುವದಿಲ್ಲ. ನಾಲ್ಕು ವರ್ಣಗಳನ್ನು ಆಯಾ ಮನುಷ್ಯರು ಮಾಡುವ ಕಲಸವನ್ನು ತಿಳಿಸುತ್ತಿವೆ. ಅಷ್ಟೇ ವಿನಃ ಸಾಂಘಿಕ ಬಾಂಧ್ಯವನ್ನು ನಿಯಮಿಸುವುದಿಲ್ಲ. ವರ್ಣಗಳು ಆಯಾ ಮನುಷ್ಯರು ಮಾಡಬೇಕಾದ ವಿಧಿಗಳನ್ನು ಪ್ರಕಾಶಪಡಿಸುತ್ತಿವೆ. ಅಷ್ಟೇ ಹೊರತು ಯಾರಿಗೂ ಹಕ್ಕುಗಳನ್ನು ಕೊಡುವುದಿಲ್ಲ. ಒಬ್ಬರದು ಅಧಿಕ ಪದವಿಯೆಂದೂ, ಮತ್ತೊಬ್ಬರದು ಕೀಳ ಪದವಿಯೆಂದೂ ಗೌರವದಲ್ಲಿ ಎಂತಹ ಹೆಚ್ಚು ಕಡಿಮೆಗಳನ್ನು ನಿರೂಪಿಸುವುದು ಹಿಂದೂ ಮತ ತತ್ವಕ್ಕೇ ವಿರುದ್ಧವಾಗಿರುವುದು. ಎಲ್ಲರೂ ಈಶ್ವರ ಸೃಷ್ಟಿಯನ್ನಲಂಕರಿಸುವುದಕ್ಕೆ ಜನ್ಮಿಸಿರುವರು ಬ್ರಾಹ್ಮಣನು ತನ್ನ ಬುದ್ಧಿಬಲದಿಂದಲೂ, ಕ್ಷತ್ರಿಯನು ತನ್ನ ಬಾಹುಬಲದಿಂದಲೂ, ವೈಶ್ಯನು ತನ್ನ ವಾಣಿಜ್ಯ ಕೌಶಲತೆಯಿಂದಲೂ, ಶೂದ್ರನು ತನ್ನ ಕಾಯಕಷ್ಟದಿಂದಲೂ ಎಲ್ಲರೂ ಈಶ್ವರಾರಾಧನವನ್ನು ಮಾಡಲು ಜನ್ಮಿಸಿರುವರು. ಆದರೆ ಇಷ್ಟುಮಾತ್ರದಿಂದ ಬ್ರಾಹ್ಮಣನು ಕಾಯಕಷ್ಟಪಡಬೇಕಾದ ಕಲಸವಿಲ್ಲದೆಯಾಗಲೀ, ಶೂದ್ರನು ತಾನು ಅಪೇಕ್ಷಿಸಿದ ಜ್ಞಾನವನ್ನು ಸಂಪಾದಿಸಕೂಡದೆಂದೂ ಎಲ್ಲೂ ಅರ್ಥವಿಲ್ಲ. ಆದರೆ, ಅದರಲ್ಲಿ ಒಂದು ಸಂಗತಿಮಾತ್ರ ಗಮನಿಸಬೇಕಾಗಿರುವುದು. ಜನ್ಮಿಸಿದುದರಿಂದಲೇ ಬ್ರಾಹ್ಮಣನಿಗೆ ಬುದ್ಧಿಬಲವೂ ಶೂದ್ರನಿಗೆ ಕಾಯಬಲವೂ ಪ್ರಧಾನವಾಗಿರುವುದು. ಆದುದರಿಂದ ಪಾರಂಪರ್ಯದಿಂದಲೂ ಚಿರಕಾಲಸಾಧನದಿಂದಲೂ ಬ್ರಾಹ್ಮಣನು ಜ್ಞಾನಪ್ರಚಾರಕ್ಕೂ, ಶೂದ್ರನು ಕಾಯಕಷ್ಟಕ್ಕೂ ಇತರರಿಗಿಂತಲೂ ವಿಶೇಷ ಸಾಮರ್ಥ್ಯವನ್ನುಳ್ಳವರಾಗಿರುವರು.

ಹೀಗೆ ಒಬ್ಬೊಬ್ಬರೂ ಒಂದೊಂದು ರೀತಿಯಾಗಿ ಮಾನವಕೋಟಿಗೆ ಸೇವೆಮಾಡಲು ಸಮರ್ಥರಾಗಿರುವರು. ಆದ್ದರಿಂದ ಒಬ್ಬರು ಇನ್ನೊಬ್ಬರ ಶಕ್ತಿಯನ್ನಾಗಲೀ, ಅರ್ಹತೆಯನ್ನಾಗಲೀ ನೋಡಿ ಅಸೂಯೆಪಡುವುದಕ್ಕಾರೆಯಲ್ಲ. ಹಾಗೆಯೇ ತನ್ನ ಪ್ರತ್ಯೇಕ ಅರ್ಹತೆಯನ್ನು ನೋಡಿ ಯಾವದೊಂದು ವರ್ಣವನ್ನೂ ಅಲ್ಲಗಳೆಯಬಾರದು. ಬ್ರಾಹ್ಮಣನು ತನಗಿರುವ ಬುದ್ಧಿಬಲವನ್ನು ನೋಡಿಕೊಂಡು ತಾನೇ ಇತರರಿಗಿಂತ ಉತ್ತಮನೆಂದುಕೊಳ್ಳಬಾರದು. ಎಲ್ಲಾ ಬಲಗಳೂ ಗೌರವದ ಸಮಾನವೇ—ಸಂಘಕ್ಕೆ ಎಲ್ಲವೂ ಅವಶ್ಯಕವೇ.

ಇಂತಹ ಸಂಘಶಕ್ತಿಗಳನ್ನು ದುರ್ವ್ಯಯಮಾಡದಂತೆ ಸರಿಯಾಗಿ ಸಂರಕ್ಷಿಸಿಕೊಂಡು ಅದನ್ನು ಪರಿಮಿತವಾಗಿ ಉಪಯೋಗಿಸಿಕೊಳ್ಳುವುದೇ ವರ್ಣಾಶ್ರಮ ಧರ್ಮವಾಗಿರುವುದು.

ವರ್ಣಾಶ್ರಮಧರ್ಮವೆಂದರೆ ತನ್ನನ್ನು ತಾನು ನಿಯಮಿಸಿಕೊಳ್ಳುವುದು. ಇಲ್ಲದಿದ್ದರೆ ನಿಗ್ರಹಿಸಿಕೊಳ್ಳುವುದು ಎಂದರ್ಥವು. ಇತರ ಕುಲಗಳವರಲ್ಲಿ ಸೇರಿ ಭೋಜನವನ್ನು ಮಾಡುವುದಾಗಲೀ ಇತರ ಕುಲದವರಲ್ಲಿ ಹೆಣ್ಣುಗಳನ್ನು ತರುವದಾಗಲೀ ಕೊಡುವದಾಗಲೀ ವರ್ಣಾಶ್ರಮಕ್ಕೆ ಭಂಗಬಾರದಿದ್ದರೂ, ಅಂತಹ ಸಹಪಂಕ್ತಿ ಭೋಜನಾದಿಗಳು ಕೂಡದೆಂದು ಹಿಂದೂ ಮತವು ಕೂಗಿಹೇಳುತ್ತಿರುವದು. ಹಿಂದೂಮತವು ನಿಗ್ರಹಶಕ್ತಿಯಲ್ಲಿ ಮಹೋನ್ನತ ಶಿಖರವನ್ನು ಅಭಿಷ್ಟಿಸಿತು ಆತ್ಮಕ್ಕೆ ವಿಮುಕ್ತಿಗೆ ಉಂಟುಮಾಡುವುದಕ್ಕೆ ಭೌತಿಕವನ್ನು ತ್ಯಾಗಮಾಡಿದ ಮಹೋತ್ಕರ್ಷವಾದುದು ಈ ಹಿಂದೂಮತವು. ತನ್ನ ಕುಮಾರನ ಸಂಗಡ ಕಲೆತು ಭೋಜನವನ್ನು ಮಾಡುವುದು ಹಿಂದುವಿನ ಮತವಿಧಿಯಲ್ಲಿ ಬಂದಾಗಿಲ್ಲ.

ಬಂದು ಶಾಖೆಯಲ್ಲಿನ ಮಕ್ಕಳನ್ನೂ ಎರಡನೆಯ ಶಾಖೆಯ ಮಕ್ಕಳನ್ನೂ ವಿವಾಹಮಾಡಕೂಡದೆಂದು ನಿಯಮಿಸಿಕೊಳ್ಳುವದರಲ್ಲಿ ಹಿಂದುವು ಅಸಾಧಾರಣವಾದ ನಿಗ್ರಹಶಕ್ತಿಯನ್ನು ತೋರಿಸುತ್ತಿರುವನು.

ವಿವಾಹಮಾಡಿಕೊಳ್ಳಲು ಆತ್ಮವಿಮುಕ್ತಿಗೆ ಅವಶ್ಯವೆಂದು ಹಿಂದೂಮತವು ಹೇಳದು. ಜನ್ಮವೆತ್ತುವುದು ಎಷ್ಟು ದುಃಖವೋ ಭಾರ್ಯೆಯನ್ನು ಹೊಂದಿರುವದೂ ಅಷ್ಟು ದುಃಖಕರವೇ. ಜನನಮರಣ ರೂಪವಾದ ಸಂಸಾರ ಬಂಧನಗಳಿಂದ ಬಿಟ್ಟಿರುವದೇ ಮೋಕ್ಷವು. ಆತ್ಮಕ್ಕೆ ಶೀಘ್ರವಾಗಿ ವಿಮುಕ್ತಿಯುಂಟಾಗಬೇಕೆಂದರೆ ಸಹಪಂಕ್ತಿ ಭೋಜನಗಳನ್ನೂ ಅಂತರ್ಜಾತಿ ವಿವಾಹಗಳನ್ನೂ ನಿಷೇಧಿಸುವುದು ಅತ್ಯವಶ್ಯಕವು. ಯಾರಾದರೂ ತನಗೆ ತಾನು ಇಂಥಾ ನಿಯಮಗಳನ್ನು ಏರ್ಪಡಿಸಿಕೊಂಡರೆ. ಅದಕ್ಕೂ ವರ್ಣಭೇದಕ್ಕೂ ಎಷ್ಟು ಮಾತ್ರವೂ ಸಂಬಂಧವಿಲ್ಲವು. ಇಂತಹ ನಿಯಮವು ವರ್ಣಾಭೇದಸಮವನ್ನು ಸೂಚಿಸುವ ಗುರುತಾಗಿ ಎಣಿಸಲ್ಪಡುವದಿಲ್ಲ. ಬ್ರಾಹ್ಮಣನು ತನ್ನ ಬುದ್ಧಿಬಲದಿಂದ ಸಂಘಸೇವೆ ಮಾಡುತ್ತಿರುವವರೆಗೂ, ಶೂದ್ರನ ಸಂಗಡ ಸೇರಿ ಭೋಜನಮಾಡಿದ್ದೂ ಬ್ರಾಹ್ಮಣನಾಗಿಯೇ ಇರುವನು. ಣತ್ವವು ಹೋಗದು. ಜನ ವಿವಾಹಾದಿಗಳಲ್ಲಿ ಗಳು ಒಂದು ವರ್ಣವು ಹ ಕವು ಎಂಬ ಭಾವದಿಂದ ನು ಅವನಿಗಿಂತ ಒಳ್ಳೆಯ ಆದ್ದರಿಂದ ಅವನ ಜೊತೆಯಲ್ಲಿ ಎಂದ ಹೇಳುವಾ ಹಿಂದುವು ತೆ ರ್ಥ ಮಾಡತ್ತಿರುವನೆಂದು ತಿಳಿಸಿದರೆ.

ನಮ್ಮ ದುರದೃಷ್ಟವಶಾತ್, ತಾತ್ಪರ್ಯದೂಮತವೆಲ್ಲವೂ, ಇತರರಲ್ಲಿ ಕಲೆತು ಭೋಡುವುದೇ ಇಲ್ಲವೇ ಎಂಬ ವಿಷಯದಲ್ಲಿಯೇ ಸೂಗುತ್ತಿದೆ. ನಾನೊಂದು ಪರ್ಯಾಯದಲ್ಲಿ ಮಹಷಿಯನ ಮನೆಯ ರೊಟ್ಟಿಯನ್ನು ತಿನ್ನುತ್ತಿರುವಲ್ಲಿ ಪೂರ್ವಾಚಾರಪರಾಯಣನಾದ ಹಿಂದುವು ಸೊಳಲಾರದಷ್ಟು ಆಶ್ಚರ್ಯ ವಿಷಾದಗಳನ್ನು ಹೊರ

ಕೇವಲ ಭೋಜನ ಪ್ರತಿ ಭೋಜನಾದಿಗಳರಿತು ಮಾತ್ರವೇ ಧರ್ಮಲೇಶಗಳನ್ನು ಹುಳ್ಳುತ್ತ ಕುಳಿತಿದ್ದರೆ ಹಿಂದೂ ಮತಕ್ಕೆ ತಪ್ಪುಉಂಟಾಗುವುದು.

ವೃತ್ತಾಂತ ಸಂಗ್ರಹ

ಜೋಧಪುರದಲ್ಲಿ ಟೈಪ್‌ರೈಟಿಂಗ್ ಅಥವಾ ಸೈಕ್ಲೊಸ್ಟೈಲ್ ಮಿಷನ್ನುಗಳನ್ನು ಯಾರಾದರೂ ತಮ್ಮ ಹತ್ತಿರ ಇಟ್ಟುಕೊಳ್ಳಬೇಕಾದರೆ ಪೋಲೀಸಿನವರಿಂದ ಲೈಸೆನ್ಸನ್ನು ಪಡೆಯಬೇಕೆಂಬ ಪದ್ಧತಿಯಾಗಿರುತ್ತದಂದು ಅಲ್ಲಿಯ 'ರಯೋಸಾಟ್' ಪತ್ರಿಕೆಯಿಂದ ತಿಳಿಯಬಂದಿದೆ.

ಹಾಲೆಂಡಿನಿಂದ ಬೊಂಬಾಯಿಗೂ ಕರಾಚಿಗೂ ಈ ಸಂವತ್ಸರದಲ್ಲಿ ೧೨೫೦೦೦ ಮಣದಷ್ಟು ತುಪ್ಪ ಬಂದಿರುವದಾಗಿ ತಿಳಿಯಬಂದಿದೆ.

ಪ್ಯಾರಿಸ್ಸಿನಲ್ಲಿ ರಾಯಭಾರಿಗಳ ಸಮ್ಮೇಳನ ನಡೆದು ಬೆಲ್ಜೀರಿಯಾವು ತನ್ನ ಸೈನ್ಯವನ್ನು ಮೇ ತಿಂಗಳೊಳಗೆ ೧೦ ಸಾವಿರಕ್ಕೆ ಹೆಚ್ಚಿಸಬಹುದೆಂದು ಅಪ್ಪಣೆ ಕೊಡಲಾಗಿದೆ.

ಐರಿಷ್ ಫ್ರೀ ಸ್ಟೇಟಿನವರು ಬೀ ವೇಲಿನ ಸುಂಕವನ್ನು ತೆಗೆದುಹಾಕಿರುತ್ತಾರೆ.

ಲಾಹೋರಿನಲ್ಲಿ ಕ್ಯಾಪ್ಟನ್ ಮಾರಿಸ್ ಎಂಬುವರು ಪೋಲೋ ಆಡುತ್ತಿದ್ದಾಗ ಕುದುರೆಯಿಂದ ಕೆಳಕ್ಕೆ ಕೆಡವಲ್ಪಟ್ಟು ತುಂಬಾ ಜಖಂಗೊಂಡು ಕೂಡಲೆ ಆಸ್ಪತ್ರೆಗೆ ಸಾಗಿಸಲ್ಪಟ್ಟು, ಸ್ವಲ್ಪ ಹೊತ್ತಿನಲ್ಲಿಯೇ ಮೃತರಾದರು.

ಮುಲ್ತಾನಿನಲ್ಲಿ ಈಚೆಗೆ ಹುಟ್ಟಿರುವ ಒಂದು ಮೊಗುವಿಗೆ ೨ ತಲೆಯೂ, ೩ ಮೊಗೂ, ೪ ಕಣ್ಣುಗಳೂ ೪ ಕಿವಿಗಳೂ ಇವೆಯೆಂದೂ, ಅನೇಕರು ನೋಡಿ ಆಶ್ಚರ್ಯಭರಿತರಾಗುತ್ತಿರುವರೆಂದೂ ತಿಳಿಯಬಂದಿದೆ.

ಐರಿಷ್ ಸುಂಕದ ತೆರಿಗೆಯ ಪೈಕಿ ಸಕ್ಕರೆಗೆ 1 ಪೌಂಡಿಗೆ 1 ಪೆನಿಯಂತೆ ಇಳಿಸಲ್ಪಟ್ಟಿದೆ.

ಲಾರ್ಡ್ ರೀಡಿಂಗ್‌ರವರು ಇಂಗ್ಲೆಂಡನ್ನು ತಲಪಿರುತ್ತಾರೆ. ಪುನಃ ಇಂಡಿಯಾಕ್ಕೆ ವಾಪಸು 24ನೇ ಜುಲೈನಲ್ಲಿ ಹೊರಡುವರೆಂದೂ. ಇಂಗ್ಲೆಂಡಿಗೆ ಹೋದದ್ದು ತುಂಬಾ ಸಂತೋಷ ಉಂಟಾಗಿದೆಯೆಂದೂ ಹೊಸ ಸರ್ಕಾರದೊಡನೆ ಇಂಡಿಯಾಕ್ಕೆ ಸಂಬಂಧಪಟ್ಟ ಕೆಲ ಮುಖ್ಯ ವಿಷಯ ಚರ್ಚೆಗಾಗಿ ಅಲ್ಲಿಗೆ ಹೋಗಿರುವದೆಂದೂ ಮುಂತಾಗಿ ರೂಟರವರ ಪ್ರತಿನಿಧಿಗೆ ತಿಳಿಸುತ್ತಾರೆ.

ಡಿಸ್ಟ್ರಿಕ್ಟಿನ ಶ್ರೀಪುರದ ನಾಮದಾಸನು ಮಾಡಿಕೊಂಡಿದ್ದ ಹಸುವನ್ನು ಒಂದ ಲಾಭಕ್ಕೆ ಮಾರಿದನು. ಇದು ಕೆಲಸವೆಂದು ಅವನನ್ನು ಷ್ಕಾರ ಮಾಡಿದರು. ವಿಪ ನಾಮದಾಸನು ಅವಶ್ಯಕ ಸ್ಪಷ್ಟ ಮಾಡಿಕೊಳ್ಳಲು ಒಪ್ಪಿ ಯ ಪಂಡಿತರನ್ನು ತಿಳಿಸಲು ಶ್ಚಿತ್ತಕ್ಕೆ 100 ರೂಪಾಯಿಗಳನ್ನು ಬಡವನು ಅಷ್ಟು ಹಣವಿಲ್ಲವೆಂದೂ ಯಿಗಳನ್ನು ಕೊಡುವೆನೆಂದೂ ತಿಳಿಸಲು ರಾಶಿ ಪಂಡಿತರಿಗೆ ಇದು ತೃಪ್ತಿಕರವಾಗಲಿಲ್ಲ. ಹಿಂಸೆ ಪ್ರಾರಂಭವಾಗಲು ಈತನು ಮನಸೊಂ ಜಾರಿವಿಂದಲೂ ಜಿಗುಪ್ಸೆಯಿಂದಲೂ ತನ್ನ ತ್ಯಜಿಸಿ ಸಂಸಾರ ಸಮೇತನಾಗಿ ಮಹ ಮತವನ್ನು ಅವಲಂಬಿಸಿದನೆಂದು ಅ. ಬ. ತಿಳಿಸುತ್ತಿದೆ.

ಸಿಗರೇಟನ್ನು ಸೇದುವವರು ದಿನೇದಿನೇ ಹೆಚ್ಚುತ್ತಿರುತ್ತದೆಂಬ ಅಂಶವನ್ನು ಕುರಿತು ಒಂದು ಅಮೇರಿಕಾದ ಪತ್ರಿಕೆಯು ಪ್ರಕಟಿಸುತ್ತದೆ. ಸಂಯುಕ್ತಸಂಸ್ಥಾನದಲ್ಲಿ 1910—11 ರಲ್ಲಿ 1300 ಕೋಟಿಯಷ್ಟು ಸಿಗರೇಟು ಸೇದಲ್ಪಡುತ್ತಿದ್ದವೆಂದೂ, 1924 ರಲ್ಲಿ 7100ಕೋಟಿಗೆ ಹೆಚ್ಚಿದೆಯೆಂದೂ; ಇಟಲಿಯಲ್ಲಿ 10 ವರ್ಷಕ್ಕೆ ಹಿಂದೆ ಉಪಯೋಗಿಸಲ್ಪಡುತ್ತಿದ್ದಕ್ಕಿಂತ 3 ರಷ್ಟು ಹೆಚ್ಚಿದೆಯಂದೂ; ಸ್ವೀಡನ್ನಿನಲ್ಲಿ 2 ರಷ್ಟು ಹೆಚ್ಚಿರುವುದೆಂದೂ; ಜರ್ಮನಿಯಲ್ಲಿ 1200 ಕೋಟಿಯಿಂದ 2300 ಕೋಟಿಗೆ ಹೆಚ್ಚಿರುವುದೆಂದೂ; 1913 ರಲ್ಲಿ ಜಪಾನಿನಲ್ಲಿ 7000 ಮಿಲಿಯರ್ಡ್ ಸಿಗರೇಟುಗಳು ಸೇದಲ್ಪಟ್ಟವೆಂದೂ 1923ರಲ್ಲಿ 2300 ಕೋಟಿ ಆಗಿದೆಯೆಂದೂ; ಗ್ರೇಟ್‌ಬ್ರಿಟನ್ನಿನವರು 1924 ರಲ್ಲಿ ಅಮೇರಿಕಾ ಹೊಗೇಸೊಪ್ಪನ್ನು 15 ಕೋಟಿ 30 ಲಕ್ಷದಷ್ಟು ತರಿಸಿಕೊಂಡಿರುವರೆಂದೂ: ಜೈನಾದವರು 7 ಕೋಟಿ 20 ಲಕ್ಷದಷ್ಟು ತರಿಸಿಕೊಂಡಿರುವರೆಂದೂ ವ್ಯಕ್ತಪಡುತ್ತಿ

ಮೈಸೂರು ಎಕನಾಮಿಕ್ ಕಾನ್ಫರೆನ್ಸಿನ ಅಧಿವೇಶನವು ಜೂನ್ ೧೨ಕ್ಕೆ ಪ್ರಾರಂಭವಾಗುತ್ತದೆ.

ಮೈಸೂರು ಪ್ರಜಾಪ್ರತಿನಿಧಿ ಸಭೆಯ ಒಜ್ಜೆಟ್ ಅಧಿವೇಶನವು ಬರುವ ಜೂನ್ ತಿಂಗಳು ೪ನೇ ತಾರೀಖಿನ ದಿವಸ ಮೈಸೂರು ಜಗನ್ಮೋಹನ ಬಂಗಲೆಯಲ್ಲಿ ಪ್ರಾರಂಭವಾಗುತ್ತದೆ.

ಮೈಸೂರು ಡಿಸ್ಟ್ರಿಕ್ಟ್ ಬೋರ್ಡಿನವರು ಹಿಂದೆ ಪ್ರಚಾರಕ್ಕಾಗಿ ಮಾಹೇಯಾನ ೧೦ ರೂಪಾಯಿಗಳನ್ನು ಖರ್ಚುಮಾಡಲಾಗಿರುವವರು.

ಮೈಮೆನ್‌ಸಿಂಗಿನಲ್ಲಿ ನಡೆದ ಈ ಕಾರ್ಯದಿಂದ ಹೇಗೆ ಹಿಂದೂ ಜನಾಂಗದ ಹಿಂಸೆ ಮತ್ತು ದುಂಡಾವರ್ತಿಯಿಂದಲೇ ಹೇಗೆ ಹಿಂದೂಗಳು ಕ್ರೈಸ್ತಿಯರ್ ಮತ್ತು ಮಹಮ್ಮದೀಯ ಮತವನ್ನವಲಂಬಿಸುತ್ತಾರೆಂದು ದೃಢಪಡುತ್ತದೆ.

ಮಿಷನರಿಗಳ ಹಾವಳಿಯ ವಿಷಯವಾಗಿ ಆಗಿಂದಾಗ್ಗೆ ವಿವಿಧ ವರ್ತಮಾನಗಳು ಹೊರಡುತ್ತಿವೆ ಈ ಸಂಬಂಧದಲ್ಲಿ ಒಂದು ಹೊಸ ವಿಷಯ ಹೊರಬಿದ್ದಿದೆ ತಿರುಚನಾಪಳ್ಳಿಯಲ್ಲಿ ಅಲ್ಲಿಯ ಕ್ಯಾಥೊಲಿಕ್ ಸ್ಕೂಲಿನಲ್ಲಿ. ಅದೇ ಸ್ಥಳದ ಸಬ್ ಮ್ಯಾಜಿಸ್ಟ್ರೇಟರ ಮಗಳು ಓದುತ್ತಿದ್ದಳು. ಇವರು ಕ್ರೈಸ್ತಿಯರ್ ಮತದ ಪ್ರಾಟೆಸ್ಟೆಂಟ್ ಪಂಗಡಕ್ಕೆ ಸೇರಿದವರು. ಈ ಹುಡುಗಿ ಸ್ಕೂಲಿನಲ್ಲಿ ಓದುತ್ತಿದ್ದಾಗ ಅಲ್ಲಿಯ ರೋಮನ್ ಕ್ಯಾಥೊಲಿಕ್ ಮಿಷನರಿ ಹೆಂಗಸಿನ ಜೊತೆ ಸೇರಿ, ಅವಳ ತಂದೆ ತಾಯಿಗಳ ಅಪ್ಪಣೆ ಇಲ್ಲದೆ ಅವರೊಡನೆ ಸೇರಿಸಿಕೊಳ್ಳಲ್ಪಟ್ಟಳು. ಇದು ತಿಳಿದುಬರಲು, ತಂದೆಯು ಮಗಳನ್ನು ಅಲ್ಲಿಂದ ಮನೆಗೆ ಕರೆದುಕೊಂಡು ಬಂದು ಮದುರೆಗೆ ಕಳುಹಿಸಿ, ಅಲ್ಲಿಯ ಅಮೆರಿಕನ್ ಮಿಷನ್ ಕಾಲೇಜಿನಲ್ಲಿ ವಿದ್ಯಾಭ್ಯಾಸಕ್ಕೆ ಏರ್ಪಡಿಸಿದನು ಸ್ಕೂಲು ಮಚ್ಚಿದಾಗ; ಹುಡುಗಿಯು ಕತಲೂರಿಗೆ ಬರಲು ಹೊರಟಿದ್ದಾಗ, ಮೇಲ್ಕಂಡ ರೋಮನ್ ಕ್ಯಾಥೊಲಿಕ್ ಮಿಷನರಿ ಹೆಂಗಸರು ತಿರುಚಿನಾಪಳ್ಳಿ ಸ್ಟೇಷನ್ನಿನಲ್ಲಿ ಹುಡುಗಿಯನ್ನು ಕಂಡು ತಮ್ಮ ಸ್ಥಳಕ್ಕೆ ಪುನಃ ಕರೆದುಕೊಂಡು ಹೋಗಿ, ಹುಡುಗಿಯನ್ನು ರೋಮನ್ ಕ್ಯಾಥೊಲಿಕ್ ಮತಕ್ಕೆ ಬದಲಾಯಿಸಿದರು. ತಂದೆಯು ಹುಡುಗಿಯನ್ನು ಪುನಃ ಕರೆದುಕೊಂಡು ಹೋಗಿದ್ದಾಗ ಹುಡುಗಿಯು [illegible]

ವಸ್ತುಗಳನ್ನು ತೆಗೆದುಕೊಂಡಿದ್ದರೆಂದೂ ಆ ಮಿಷನರಿಗಳ ಮೇಲೆ ದ್ಹಾವಾ ಹಾಕಿದನು. ಕೂಡಲೆ ಅವರು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರವಲ್ಲಿ ಅರ್ಜಿ ಹಾಕಿ. ಹುಡುಗಿಯು ಮೆಜಾರಿಟಿಗೆ ಬಂದಿರುವುದರಿಂದ ಅವಳು ಇಷ್ಟ ಪ್ರಕಾರ ನಡೆಯಬಹುದೆಂದು ತಿಳಿಸಲು, ಮ್ಯಾಜಿಸ್ಟ್ರೇಟರು ತನ್ನ ಆರ್ಡರಿನಲ್ಲಿ ಈ ವಿಷಯವನ್ನು ಅನುಮೋದಿಸಿದರು. ತಂದೆ ತಾಯಿ ಅಣ್ಣ ತಮ್ಮಂದಿರು ಎಷ್ಟು ಬೇಡಿಕೊಂಡಾಗ್ಯೂ: ಹುಡುಗಿಯು ಮನಸ್ಸನ್ನು ಬದಲಾಯಿಸದೆ ಮಿಷನರಿ ಹೆಂಗಸರೊಡನೆ ಹೊರಟು ಹೋದಳು ಕ್ರೈಸ್ತಿಯರ್ ಜಾತಿಯಲ್ಲಿ ಪಂಗಡದಿಂದ ಪಂಗಡಕ್ಕೆ ಮತ ಬದಲಾಯಿಸಲು ಈ ರೀತಿ ಯಾದಲ್ಲಿ, ಇತರ ಜಾತಿಯಿಂದ ತಮ್ಮ ಜಾತಿಗೆ ಸೇರಿಸಿಕೊಳ್ಳಲು ಕ್ರೈಸ್ತಿಯರ್ ಮಿಷನರಿಗಳು (ಯಾವ ಪಂಗಡದವರೇ ಆಗಲಿ) ಎಷ್ಟು ಆಸೆಪಡುವರು!

ಬರ್ಡ್ವಾನಿನ ಮಹಾರಾಜಾಧಿರಾಜರು ಬೆಂಗಳೂರಿಗೆ ಬಂದಿರುತ್ತಾರೆ. ಸಂಸ್ಥಾನದ ಅತಿಥಿಗಳಾಗಿ ಕುಮಾರಪಾರ್ಕಿನಲ್ಲಿ ಇಳಿದುಕೊಂಡಿರುತ್ತಾರೆ.

ಕಳೆದ ೨೩ನೆ ತಾರೀಖಿನ ದಿವಸ ಹರಪನಹಳ್ಳಿಗೆ ೧೦ ಮೈಲಿ ಆಚೆಯಿರುವ ಅರಸೀಕರೆ ಸ್ಟೇಷನ್ನಿನ ಪೋಲೀಸ್ ಸಬ್ ಇನ್‌ಸ್ಪೆಕ್ಟರ್ ವೀರಪ್ಪಾಜಿ ಎಂಬುವರನ್ನು ಅವರ ಕೈಕೆಳಗಿನ ಪೋಲೀಸ್ ಕಾನ್‌ಸ್ಟೆಬಲ್ಲೇ ತಿವಿದುಕೊಂದನು. ಕಾರಣ—ಈ ಕಾನ್‌ಸ್ಟೆಬಲ್ ಪರಿಯಾ ಜಾತಿಯವನಾದುದರಿಂದ ಅಲ್ಲಿಯ ಜನರು ತಾವು ನೀರು ತೆಗೆದುಕೊಳ್ಳುತ್ತಿದ್ದ ಭಾವಿಯಲ್ಲಿ ಈತನು ನೀರು ತೆಗೆದುಕೊಳ್ಳಲು ಪ್ರತಿಭಟಿಸುತ್ತಿದ್ದರು; ಈ ಇನ್‌ಸ್ಪೆಕ್ಟರು ಅವನನ್ನು ಅಲ್ಲಿ ನೀರು ತೆಗೆದುಕೊಳ್ಳ ಬಾರದೆಂದು ಖಡ್ಡಾಯವಾಗಿ ತಿಳಿಸಿದ್ದಕ್ಕಾಗಿ ಕಾನ್‌ಸ್ಟೆಬಲ್ಲಿಗೆ ಆಕ್ರೋಶ.

ವ್ಯಾಟ್ಸನಿಂದ ನೂಯಾರ್ಕಿಗೆ ಒಂದೇ ಸಮನಾಗಿ ಎಲ್ಲೂ ನಿಲ್ಲಿಸದೆ ಹೋಗಲು ಒಂದು ಭಾರಿ ಏರೋಪ್ಲೇನು ತಯಾರಾಗುತ್ತಿದೆ. ಇದರ ಮೊಟಾರು ೫೫೦ ಕುದುರೆ ಶಕ್ತಿಯುಳ್ಳದ್ದಾಗಿರುವುದು.

ಕಳೆದ ೨೭ನೇ ತಾರೀಖಿನ ದಿವಸ ಬಾವ್ಲಾ ಖೂನಿ ಮೊಖದ್ದಮೆಯ ವಿಚಾರಣೆಯು ಬೊಂಬಾಯಿ ಹೈಕೋರ್ಟಿನಲ್ಲಿ ಮಿ|| ಜಸ್ಟಿಸ್ ಕ್ರಂವ್‌ರವರ ಮುಂದೆ ಪ್ರಾರಂಭವಾಗಿದೆ

ಅಖಿಲ ಭಾರತ ರಾಷ್ಟ್ರೀಯ ೩೯ನೆ ಅಧಿವೇಶನದ ಸ್ವಾಗತ ಮಂಡಲಿಯ ಜನರಲ್ ಮೀಟಿಂಗು ಈ ತಿಂಗಳು ೧೨—೧೩ರಲ್ಲಿ ಬೆಳಗಾವಿನಲ್ಲಿ ನಡೆಯುತ್ತದೆ.

ಹೈದರಾಬಾದಿನಲ್ಲಿ ಕೆಲವು ದಿವಸಗಳ ಹಿಂದೆ ೯ ವರುಷದ ಹಿಂದೂ ಬನಿಯಾ ಜಾತಿಯ ಹುಡುಗಿ ಒಬ್ಬಳು ತಪ್ಪಿಸಿಕೊಂಡಿದ್ದಳು. ನಂತರ ಆ ಹುಡುಗಿಯ ಶವವು ಗುರುತಿಗೆ ಆಸ್ಪದವಿಲ್ಲದಂತೆ ಪಕ್ಕದ ಮನೆಯಲ್ಲಿ ಪತ್ತೆಯಾಯಿತು. ಕಾರಣ ತಿಳಿದಿದ್ದರಲ್ಲಿ ಯಾರೋ ಕೆಲವು ಕ್ರೂರಾತ್ಮಿಗಳಾದ ಘಾತುಕರು ಆ ಬಾಲಕಿಯ ಮೇಲೆ ದುರಾಚಾರ ಅಕೃತ್ಯ ನಡೆಸಿ ತಮ್ಮ ಅಕಾರ್ಯವು ಹೊರಪಡುವುದೆಂಬ ಭೀತಿಯಿಂದ ಆ ಹುಡುಗಿಯ ಕುತ್ತಿಗೆ ಹಿಸುಕಿದ್ದರಿಂದಲೆ ಅಲ್ಲದೆ ಈ ವಿಷಯವನ್ನು ತಿಳಿದಿದ್ದ ವೃದ್ಧಾಯಸ್ಥ ವ್ಯಾಪಾರಿಯೊಬ್ಬನನ್ನೂ ಕೊಂದುಹೋಗಿದ್ದರಂತೆ. ಈ ಕ್ರೂರಾತ್ಮಿಗಳ ಪೈಕಿ ೭ ಜನ ಘಾತುಕರನ್ನು ಪೋಲೀಸಿನವರು [illegible]